**<u>2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕುಂದಾಪುರ</u>**

**ಅಸಲು ದಾವೆ ಸಂಖ್ಯೆಃ 315/2015** **ಪಿ.ಡಬ್ಲ್ಯೂ-2**

ದಿನಾಂಕಃ 03-11-2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನ ಭೋದಿಸಲಾಯಿತು

<u>ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಎಂ.ಎಂ.ಎಚ್ ರವರಿಂದ</u>

ನಾನು ಬ್ರಹ್ಮಾವರ ತಾಲೂಕಿನ ನಂಚಾರಿನಲ್ಲಿ ವಾಸ್ತವ್ಯ ಇದ್ದೇನೆ. ನಾನು ನಂಚಾರಿನಲ್ಲಿ ಹುಟ್ಟಿ ಬೆಳೆದಿರುತ್ತೇನೆ. ದಾವಾ ಆಸ್ತಿ ಕುಂದಾಪುರ ತಾಲೂಕಿನ ಉಳ್ಳೂರು ಗ್ರಾಮದಲ್ಲಿದೆ. ನಂಚಾರಿನಿಂದ ದಾವಾ ಆಸ್ತಿಗೆ 20 ರಿಂದ 35 ಕಿ.ಮೀ. ದೂರವಿದೆ.

ನನ್ನ ತಂದೆ ಸ.ನಂ 174/4 ರಲ್ಲಿ 36 ಸೆಂಟ್ಸು ಮತ್ತು 174/7 ರಲ್ಲಿ 36 ಸೆಂಟ್ಸು ಆಸ್ತಿಗೆ ದಾವೆ ಹೂಡಿದ್ದಾರೆ. ಡಿಕ್ಲರೇಶನ್ ಭೂಮಿ ನನ್ನ ತಂದೆಯ ಹೆಸರಿಗೆ ಆಗಲಿಲ್ಲ ಎಂಬ ಕಾರಣದಿಂದ ಈ ದಾವೆಯನ್ನು ಹೂಡಿದ್ದಾರೆ. ದಾವಾ ಆಸ್ತಿಯನ್ನು ನಾನು ನೋಡಿರುವುದಿಲ್ಲ. ದಾವಾ ಆಸ್ತಿಯ ಸ್ವಾಧೀನತೆಗೆ ನನ್ನ ತಂದೆ ಕೇಳಿರುತ್ತಾರೆ. ಪ್ರತಿವಾದಿಯಿಂದ ಸ್ವಾಧೀನತೆಯನ್ನು ಬಿಡಿಸಿಕೊಡಬೇಕೆಂದು ನನ್ನ ತಂದೆ ದಾವೆ ಹೂಡಿರುತ್ತಾರೆ. ದಾವಾ ಆಸ್ತಿಯಲ್ಲಿ ನಾವು ಬೇಸಾಯ ಮಾಡಿಕೊಂಡಿದ್ದೇವೆ. ದಾವಾ ಆಸ್ತಿಯಲ್ಲಿ ನನ್ನ ತಂದೆಯ ಕಡೆಯವರು ಬೇಸಾಯ ಮಾಡುವುದನ್ನು ನಾನು ಸ್ವತಹಾ ನೋಡಿದ್ದೇನೆ. ದಾವಾ ಆಸ್ತಿಯಲ್ಲಿ 1 ರಿಂದ 5 ನೇ ವಾದಿಯರು ಬೇಸಾಯ ಮಾಡುತ್ತಿದ್ದಾರೆ.

ಉಳ್ಳೂರು ಗ್ರಾಮಕ್ಕೆ ನನ್ನನ್ನು ಕರೆದುಕೊಂಡು ಹೋದರೆ ದಾವಾ ಸ್ಥಳವನ್ನು ಗುರುತಿಸಬಹುದು. ದಾವಾ ಆಸ್ತಿ ಬೇರೆಬೇರೆಯಾಗಿದೆ. ದಾವಾ ಆಸ್ತಿಯ ಐಟಂ ನಂಬ್ರ 2 ರ ಪೂರ್ವ ದಿಕ್ಕಿಗೆ ಏನಿದೆ ಎಂದು ನನಗೆ ಗೊತ್ತಿಲ್ಲ. ಇತರ ದಿಕ್ಕಿಗೆ ಯಾರ ಆಸ್ತಿ ಇದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ 1 ನೇ ಐಟಂ ಆಸ್ತಿಯ ನಾಲ್ಕು ದಿಕ್ಕುಗಳಲ್ಲಿ ಯಾರ ಆಸ್ತಿ ಇದೆ ಎಂದು ನನಗೆ ಗೊತ್ತಿಲ್ಲ.

ದಾವಾ ಆಸ್ತಿಯ ಧಣಿ ಅನಂತಯ್ಯ ಶೆಟ್ಟಿ ನನ್ನ ತಂದೆ ಡಿಕ್ಲರೇಶನ್ ಅರ್ಜಿ ಸಲ್ಲಿಸಿರುತ್ತಾರೆ.

ನನ್ನ ತಂದೆಯ ಹೆಸರಿಗೆ ತೀರ್ಪಾಗಿರುವುದಿಲ್ಲ. ದಾವಾ ಆಸ್ತಿಯ ಆರ್ ಟಿ ಸಿ ಮಲ್ಯಾಡಿ ಜಯರಾಮ ಶೆಟ್ಟಿಯವರ ಅಳಿಯ ರಾಜೀವ ಶೆಟ್ಟಿಯವರ ಹೆಸರಿನಲ್ಲಿದೆ. ಸದರಿ ಆರ್ ಟಿ ಸಿ ಅವರ ಹೆಸರಿಗೆ ಆಗಿರುವುದನ್ನು ನಾನು ನೋಡಿರುವುದಿಲ್ಲ ಆದರೆ ತಂದೆ ಹೇಳಿ ಗೊತ್ತಾಯಿತು. ಭೂನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿ ತನಿಖೆಯಾದ ನಂತರ ನನ್ನ ತಂದೆಯ ಹೆಸರಿಗೆ ಆರ್ ಟಿ ಸಿ ಆಗಿರುವುದಿಲ್ಲ ಎಂದು ಹೇಳಿರುತ್ತಾರೆ. ನನ್ನ ತಂದೆಯವರು ದಾವೆಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನಾನು ನೋಡಿರುವುದಿಲ್ಲ.

ಪ್ರತಿವಾದಿಯು ಸಲ್ಲಿಸಿದ ಆಕ್ಷೇಪವನ್ನು ನನ್ನ ವಕೀಲರು ಓದಿ ಹೇಳಿರುತ್ತಾರೆ. ದಾವಾ ಆಸ್ತಿ ಅಂತಯ್ಯ ಶೆಟ್ಟಿಯವರಿಗೆ ದಿಃ07-09-1959 ಮತ್ತು 25-02-1961 ರ ಕ್ರಯದಸ್ತಾವೇಜಿನ ಪ್ರಕಾರ ಬಂದಿದೆ ಎಂದರೆ ಸರಿ. ಅಂತಯ್ಯ ಶೆಟ್ಟಿಯವರ ಕುಟುಂಬದಲ್ಲಿ 2005 ನೇ ಇಸವಿಯಲ್ಲಿ ಪಾಲಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ಮಾವ ಜಯರಾಮ ಶೆಟ್ಟಿಯವರಿಗೆ ಸದರಿ ಪಾಲಿನಲ್ಲಿ ವಿಭಾಗವಾಗಿ ಪ್ರತಿವಾದ ಪತ್ರದ ಎಕ್ಸ್ ಶೆಡ್ಯೂಲ್ ಆಸ್ತಿ ಬಂದಿದೆ ಎಂದರೆ ಸರಿ . ದಿಃ06-10-2008 ರಂದು ಜಯರಾಮ ಶೆಟ್ಟಿ ಪ್ರತಿವಾದಿಗೆ ಸದರಿ ಆಸ್ತಿಯನ್ನು ಮಾರಾಟ ಮಾಡಿದ್ದಾರೆಂದರೆ ಸರಿ. ಪ್ರತಿವಾದಿಯ ಹೆಸರಿಗೆ ಆಗಿರುವ ಕ್ರಯದಸ್ತಾವೇಜನ್ನು ನನ್ನ ತಂದೆ ಪಡೆದಿದ್ದಾರೆ. 2008 ನೇ ಇಸವಿಯಲ್ಲಿ ಕ್ರಯದಸ್ತಾವೇಜನ್ನು ಪಡೆದಾಗ ವಾದಿಯ ಹೆಸರು ಇಲ್ಲದಿರುವುದು ಗೊತ್ತಾಗಿದೆ. ನಂತರ 2014 ರಲ್ಲಿ ನನ್ನ ತಂದೆ ತಹಶೀಲ್ದಾರವರಿಗೆ ಅರ್ಜಿಯನ್ನು ನೀಡಿರುತ್ತಾರೆ.

ದಾವಾ ಆಸ್ತಿಯನ್ನು ನನ್ನ ತಂದೆ ಗೇಣಿಗೆ ಅನುಭವಿಸಿಕೊಂಡು ಬಂದಿದ್ದಾರೆಂದು ತೋರಿಸಲು ನನ್ನ ಬಳಿ ದಾಖಲೆ ಇಲ್ಲ. ದಾವಾ ಆಸ್ತಿ ಚಾಲಗೇಣಿಯಾ ಅಥವಾ ಮೂಲಗೇಣಿಯಾ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಗೇಣಿಗೆ ಪಡೆದ ವರ್ಷ ಗೊತ್ತಿಲ್ಲ. ದಾವಾ ಆಸ್ತಿ ಗೇಣಿ ಹಕ್ಕಿನ ಸ್ಥಳ ಅಲ್ಲ ಧಣಿಯ ಹಕ್ಕಿನ ಸ್ಥಳ ಎಂದರೆ ಸರಿ . ಸದರಿ ಸ್ಥಳ 1959 ಮತ್ತು 1961 ರಿಂದ ಅಂತಯ್ಯ ಶೆಟ್ಟಿಯವರ ಸ್ವಾಧೀನದಲ್ಲಿತ್ತು ಎಂದರೆ ಸರಿ .2005 ನೇ ಇಸವಿಯಲ್ಲಿ ಪಾಲುಪಟ್ಟಿಯಾದ ನಂತರ ಜಯರಾಮ ಶೆಟ್ಟಿಯವರ ಪಾಲಿಗೆ ಬಂದಿದೆ ಎಂದರೆ ಸರಿ . ಜಯರಾಮ ಶೆಟ್ಟಿಯ ನಂತರ ಅವರ ಅಳಿಯ ಖರೀದಿ ಮಾಡಿದ ಕಾರಣ ಅವರ ಸ್ವಾಧೀನದಲ್ಲಿದೆ ಎಂದರೆ ಸರಿ . ದಾವಾ ಆಸ್ತಿಯನ್ನು ನನ್ನ ತಂದೆ ಗೇಣಿ ನಾಥೆಯಿಂದ ಅನುಭವಿಸಿಕೊಂಡು ಬಂದದ್ದೇ ಇಲ್ಲ ಎಂದರೆ ಸರಿಯಲ್ಲ.

ತಹಶೀಲ್ದಾರರಿಗೆ ಅರ್ಜಿ ನೀಡಿದ ನಂತರ ಸಹಾಯಕ ಆಯುಕ್ತರಿಗೆ ನನ್ನ ತಂದೆ ಅಪೀಲು ಮಾಡಿದ್ದಾರೆ. ಸಹಾಯ ಆಯುಕ್ತರ ನ್ಯಾಯಾಲಯದಲ್ಲಿ ಸಿವಿಲ್ ನ್ಯಾಯಾಲಯಕ್ಕೆ ಹೋಗುವಂತೆ

ಆದೇಶವಾಗಿದೆ. ಸದರಿ ತೀರ್ಪನ್ನು ನಾನು ಓದಿ ನೋಡಿರುವುದಿಲ್ಲ. ದಾವೆಯ ವಿಚಾರ ನನಗೆ ಗೊತ್ತಿಲ್ಲ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ